# ಮಗುವಿನ ಮೋಜು

■ ಮಹೇಶ್ವರ ಹುರುಕಡ್ಲಿ,
ಬಾಚಿಗೊಂಡನಹಳ್ಳಿ
ಕಲೆ: ಸಂತೋಷ್ ಸಸಿಹಿತ್ಲು

ಅಜ್ಜನ ಎದೆಯದು
ಬಯಲಾಟದ ಹಲಗೆ
ಕುಣಿಯುವೆ ಹಾರುತ
ಮೇಲೆ ಕೆಳಗೆ

ಅಜ್ಜಿಯ ಬೆನ್ನಿದು
ಜಾರುವ ಬಂಡೆ
ಸುಯ್ ಸುಯ್ ಎನ್ನುತಾ
ಜಾರುವೇ ಇಂದೇ

ಅಪ್ಪನ ತೋಳಿದು
ಆನೆಯ ಸೊಂಡಿಲು
ಜಗೆಬಿದ್ದು ಜೀಕುವೆ
ಗಿರಗಿರನೆಂದು

ಅಮ್ಮನ ಮಡಿಲದು
ಭೂತಾಯಿಯ ಒಡಲು
ಮೊಳೆಯುವೆ ಚಿಗುರುವೆ
ಹೂಬನವಾಗಲು ■



## ಕುಂಚ ಪ್ರಪಂಚ





**ಸಚಿನ್ ಟಿ.ಎಸ್.**
3ನೇ ತರಗತಿ, ಆರ್ಕಿಡ್ ವಿವೇಕಾನಂದ
ಇಂಟರ್‌ನ್ಯಾಷನಲ್ ಸ್ಕೂಲ್, ಬೆಂಗಳೂರು



**ಸಮರ್ಥ್ ಜಾಜಿ**
7ನೇ ತರಗತಿ,
ಶ್ರೀ ಚೈತನ್ಯ ಟೆಕ್ನೊ ಸ್ಕೂಲ್, ಗಂಗಾವತಿ



ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in